# ಸುವರ್ಣ ಸಂಭ್ರಮದಲ್ಲಿ ‘ಮಯೂರ’

ಕನ್ನಡದ ಪತ್ರಿಕೋದ್ಯಮ, ಸಾಹಿತ್ಯಲೋಕ ಹಾಗೂ ಓದುಗರ ಮನದಲ್ಲಿ ಅಚ್ಚಳಿಯದ ಛಾಪುಮೂಡಿಸುತ್ತಿರುವ ತಿಂಗಳ ಪತ್ರಿಕೆ ‘ಮಯೂರ’ ಈ ಸಂಚಿಕೆಯಿಂದ ‘ಸುವರ್ಣ ಸಂಭ್ರಮ’ದ 50ನೇ ವರ್ಷಕ್ಕೆ (ಪ್ರಾರಂಭ: ಜನವರಿ, 1968) ಅಡಿ ಇಡುತ್ತಿದೆ. ಇದು ಪತ್ರಿಕೆಯೊಂದರ ಬೆಳವಣಿಗೆಯಲ್ಲಿ ಪ್ರಮುಖ ಘಟ್ಟ. ಕಥಾಸಾಹಿತ್ಯಕ್ಕೆ ಮೀಸಲಾದ ಈ ಪತ್ರಿಕೆಯ ಕಳೆದ 49 ವರ್ಷಗಳ ಹೆಜ್ಜೆಗುರುತುಗಳು ಅತ್ಯಂತ ವಿಶಿಷ್ಟವಾಗಿವೆ. ಓದುಗರಿಗೆ ಅಗತ್ಯವಾಗಿದ್ದರಿಂದಲೇ ಪತ್ರಿಕೆ ಇಷ್ಟು ದೀರ್ಘಕಾಲ ಪ್ರಕಟವಾಗುತ್ತ ಬಂದಿದೆ ಎಂಬುದು ನಮ್ಮ ಭಾವನೆ. ಓದುಗರ ಸತತ ಪ್ರೋತ್ಸಾಹ ಇಲ್ಲದಿದ್ದರೆ ಈ ಮೈಲಿಗಲ್ಲನ್ನು ಯಾವ ಪತ್ರಿಕೆಯೂ ಮುಟ್ಟಲು ಸಾಧ್ಯವಿಲ್ಲ.

‘ಮಯೂರ’ ಆರಂಭಗೊಂಡ ಕಾಲಕ್ಕೆ ಕಥಾಸಾಹಿತ್ಯಕ್ಕೆ ಮೀಸಲಾದ ನಿಯತಕಾಲಿಕಗಳು ಕಡಿಮೆ. ಆ ಕೊರತೆಯನ್ನು ಅದು ತುಂಬಿತು ಮಾತ್ರವಲ್ಲ, ಓದುಗರು ಅದನ್ನು ಪ್ರೀತಿಯಿಂದ ಬರಮಾಡಿಕೊಂಡರು. ಅದರ ಹೂರಣ, ಓರಣದಲ್ಲಿ ಅದರದೇ ಆದ ಹೊಸತನ, ಸಂಭ್ರಮವಿತ್ತು. ಪತ್ರಿಕೆ ಆರಂಭದಿಂದಲೂ ಎಲ್ಲ ಬಗೆಯ ಜೀವಂತವಾದ, ಓದುಗರ ಮನಮುಟ್ಟುವ ಬರಹಗಳಿಗೆ ಜಾಗ ಕೊಟ್ಟು ಪ್ರಕಟಿಸುತ್ತ ಬಂದಿದೆ. ಕನ್ನಡದ ಪ್ರತಿಭಾವಂತ ಲೇಖಕರು ‘ಮಯೂರ’ಕ್ಕೆ ಬರೆಯುತ್ತ ತಾವೂ ಸಾಹಿತ್ಯದಲ್ಲಿ ಗುರುತಿಸಿಕೊಳ್ಳುತ್ತ ಬಂದಿದ್ದಾರೆ. ಅವರ ಸಂಖ್ಯೆ ದೊಡ್ಡದು. ಬೆಸಗರಹಳ್ಳಿ ರಾಮಣ್ಣ, ಪಿ. ಲಂಕೇಶ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಯು.ಆರ್. ಅನಂತಮೂರ್ತಿ, ಬೀಚಿ, ಅನುಪಮಾ ನಿರಂಜನ, ಎಂ.ಕೆ. ಇಂದಿರಾ, ಉಷಾ ನವರತ್ನರಾಮ್, ಜಯಂತ ಕಾಯ್ಕಿಣಿ, ಬೊಳುವಾರು ಮಹಮ್ಮದ್ ಕುಂಞಿ, ಫಕೀರ್ ಮುಹಮ್ಮದ್ ಕಟ್ಪಾಡಿ, ಕೃಷ್ಣಮೂರ್ತಿ ಪುರಾಣಿಕ, ಟಿ.ಕೆ. ರಾಮರಾವ್, ಕುಂ. ವೀರಭದ್ರಪ್ಪ, ಕೃಷ್ಣಮೂರ್ತಿ ಹನೂರು, ವೈದೇಹಿ, ಎಂ.ಎಚ್. ನಾಯಕ ಬಾಡ, ಶಾಂತಾರಾಮ ಸೋಮಯಾಜಿ, ನಾ. ಡಿಸೋಜ, ಈಶ್ವರಚಂದ್ರ, ನಾಗತಿಹಳ್ಳಿ ಚಂದ್ರಶೇಖರ – ಹೀಗೆ ನೂರಾರು ಕತೆಗಾರರ ಕತೆಗಳನ್ನು ‘ಮಯೂರ’ ಪ್ರಕಟಿಸಿದೆ. ಈ ದೃಷ್ಟಿಯಿಂದ ಕನ್ನಡ ಕಥಾಸಾಹಿತ್ಯಕ್ಕೆ ಈ ಪತ್ರಿಕೆಯ ಕೊಡುಗೆ ದೊಡ್ಡದಾಗಿದೆ. ಅನೇಕ ಕತೆಗಾರರ ಮೊದಲ ಕತೆಯನ್ನು ಪ್ರಕಟಿಸಿದ್ದು ಇದೇ ಪತ್ರಿಕೆ. ಇದಲ್ಲದೇ ಕತೆಗಳೊಂದಿಗೆ ಪ್ರಕಟವಾಗುವ ರೇಖಾಚಿತ್ರಗಳು ಓದುಗರ ಮನದಲ್ಲಿ ತಮ್ಮದೇ ಸ್ಥಾನವನ್ನು ಪಡೆದಿದ್ದವು. ವಿಶಿಷ್ಟ ಅಕ್ಷರಗಳ ಕತೆಗಳ ಶೀರ್ಷಿಕೆಗಳು ಜನರ ಒಕ್ಕಣಿಕೆಯನ್ನು ತಿದ್ದುವಷ್ಟು ಪ್ರಭಾವಶಾಲಿಯಾಗಿದ್ದವು. ಈ ಚಿತ್ರಗಳು ಮತ್ತು ಹೊಸ ಶೈಲಿಯ ಅಕ್ಷರಗಳಿಲ್ಲದೇ ಆ ಕತೆಗಳನ್ನು ನೆನಪಿಸಿಕೊಳ್ಳುವುದು ಕಷ್ಟ.

ಕಾಲಕ್ಕೆ ತಕ್ಕಂತೆ ‘ಮಯೂರ’ವೂ ತನ್ನ ಮೂಲಧರ್ಮವನ್ನು ಬಿಟ್ಟುಕೊಡದೆ ಪ್ರಯೋಗಗಳನ್ನು ಮಾಡುತ್ತ ಬಂದಿದೆ. ಕತೆಯ ವಿಮರ್ಶೆ, ಅಪೂರ್ಣ ಕತೆಯನ್ನು ಪೂರ್ಣ ಮಾಡುವುದು, ತಿಂಗಳ ಕತೆ, ಹಲಬಗೆಯ ಅಂಕಣಗಳು, ಝೋ ಕಾದಂಬರಿ, ದೇಶ–ವಿದೇಶದ ಸಾಹಿತ್ಯ ಹಾಗೂ ಸಿನಿಮಾ ಕುರಿತ ಬರಹಗಳು, ಕಥಾಸ್ಪರ್ಧೆ – ಹೀಗೆ ವೈವಿಧ್ಯಮಯವಾದ ಪ್ರಯೋಗಗಳನ್ನು ಕಾಲಕಾಲಕ್ಕೆ ಮಾಡಲಾಗಿದೆ. ಇಂತಹ ಬರಹಗಳಿಂದ ಪ್ರೇರಣೆ ಪಡೆದ, ಓದಿನ ರುಚಿಯನ್ನು ಹತ್ತಿಸಿಕೊಂಡ ಸಹೃದಯರಿದ್ದಾರೆ. ‘ಸುವರ್ಣ ಸಂಭ್ರಮ’ದ ಈ ಸಂದರ್ಭದಲ್ಲಿ ನಿಮ್ಮೆಲ್ಲರ ಬೆಂಬಲ ನಿರಂತರವಾಗಿರಲಿ ಎಂಬ ಹಂಬಲವಷ್ಟೆ ನಮ್ಮದು.




**ಕೆ.ಎನ್. ಶಾಂತಕುಮಾರ್**